Dd-350
T.P-2

(1)

51st Year of Publication ★ SATYAVADI Daily, MYSORE 4

Reg No B G 155 19-7-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಪ್ರಕಾಶಕರು : ಶಿವರುದ್ರಪ್ಪನವರ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಫೈರ್‌ಮನ್‌ರ ಮುಷ್ಕರ ನಿಂತಿತು

ಶಿವಸೇನೆ

ದುರವಸ್ಥೆ

ಪೂನಾ— ನಾಸಿಕ್-ದೆಯೊಲಾಲಿ ಪುರಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಶಿವಸೇನೆಯ 9 ಮಂದಿಯೂ ಸೋತರು ; ಅಲ್ಲದೆ 7 ಮಂದಿ ಡಿಪಾಜಿಟ್ ಕಳೆಕೊಂಡರು.

ಪೂನಾ ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಶಿವಸೇನೆಯ 52 ಮಂದಿಯಲ್ಲಿ ಒಬ್ಬ ಮಾತ್ರ ವಿಜಯಗೊಂಡನು.

★

ವಿದೇಶೀ ನೆರವು

ವಾಷಿಂಗ್ಟನ್— ವಿದೇಶೀ ನೆರವಿನಲ್ಲಿ ಮತ್ತೂ 400 ಮಿಲಿಯ ಡಾಲರು ಖೋತಾ ಮಾಡಲು ಪ್ರತಿನಿಧಿಸಭೆ ಶ್ರಮಿಸಲು ನಿರ್ಧರಿಸಿದೆ.

★

ಪರಮಾಣು

ಕಠನಾಲ— ಕುರುಕ್ಷೇತ್ರ ವಿಶ್ವವಿದ್ಯಾಲಯದ ಭಾಗದಲ್ಲಿ ಪರಮಾಣು ಸಂಶೋಧನಾ ಸ್ಟೇಷನ್ ಸ್ಥಾಪಿಸಲಾಗುತ್ತದೆ.

★

ಮುಖ್ಯ ಮಂತ್ರಿಗಳು

ಬೆಂಗಳೂರು— ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಾ | 21 ರಂದು ದೆಹಲಿಗೆ ಹೋಗಿ 22-23 ರಲ್ಲಿ ಫೈನಾನ್ಸು ಕಮಿಷನ್ನಿನಲ್ಲಿ ಭಾಗವಹಿಸಿ ತಾ || 24 ರಂದು ಬರುವರು.

★

ವಿವೇಕಾನಂದ ಸ್ಮಾರಕ

ಭುವನೇಶ್ವರ— ವಿವೇಕಾನಂದ ಬಂಡೆ ಸ್ಮಾರಕವು ಕನ್ಯಾಕುಮಾರಿಯಲ್ಲಿ 1970 ರಲ್ಲಿ ಉದ್ಘಾಟಿಸಲಾಗುವದೆಂದು ಸ್ಮಾರಕ ಸಮಿತಿ ಕಾರ್ಯದರ್ಶಿ ಹೇಳಿದರು.

ಪ್ರಧಾನಿಗಳ ಸಹಾಯ

ಹೈದರಾಬಾದು — ಕಾಂಚಕಚರ್ಲಾ ಗ್ರಾಮದಲ್ಲಿ ಮಾರ್ಚ್ ತಿಂಗಳಲ್ಲಿ ಸುಟ್ಟು ಹಾಕಲ್ಪಟ್ಟ ಹರಿಜನ ಹುಡುಗನ ತಾಯಿಗೆ ಪ್ರಧಾನಿಯವರು ರೂ, 5000 ನೆರವು ನೀಡಿರುವರೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

ಅಗ್ನಿ ಅನಾಹುತ

ಜೆಂಬಾಯಿ— ಮೂರು ಅಂತಸ್ತಿನ ಒಂದು ಕಟ್ಟಡಕ್ಕೆ ಬೆಂಕಿ ಬಿದ್ದು ಹೋಯಿತು – ನಿವಾಸಿಗಳು ಹಮ್ಮು ಅಸ್ತಿ ಪಾಸ್ತಿ ಕಳೆದುಕೊಂಡು ಹತ್ತಿರದ ಸ್ಥಳಗಳಲ್ಲಿ ಆಶ್ರಯ ಪಡೆದರು

★

ಶಾಸನಸಭೆಗಳು

ಬೆಂಗಳೂರು— ಶಾಸನಸಭೆಗಳು ಸೆಪ್ಟಂಬರು 2 ರಂದು ಸೇರಿ ಒಂದು ಹಕ್ಸದವರೆಗೆ ನಡೆಯುವವು:

★

ಅವಳಿಜವಳಿ ಮಕ್ಕಳು

ವಿಶಾಖಪಟ್ಟಣ— 40 ವರ್ಷದ ಒಬ್ಬ ಅಂಟಿಕೊಂಡಿರುವ ಅವಳಿಜವಳಿ (ಎರಡೂ ಹೆಣ್ಣು) ಮಕ್ಕಳನ್ನು ಹೆತ್ತಿರುವಳು — ಆಪರೇಷನ್ ಮಾಡಿ ಎರಡು ಮಕ್ಕಳನ್ನು ಪ್ರತ್ಯೇಕಿಸಲು ಯೋಜಿಸಲಾಗಿದೆ.

ಫೈರ್ಮೆ ಚಳವಳಿ

ತಿರುಚಿ— ಫೈರ್ಮೆ ಚಳವಳಿ ನಿಂತಿತು ; ಫೈರ್ಮೆ ಸಂಘದ ಕಾರ್ಯಾಚರಣ ಸಮಿತಿ ಅಧ್ಯಕ್ಷರು ಪ್ರಕಟಿಸಿರುವರು.

★

ಜತ್ತಿ ಗುಂಪು

ಬೆಂಗಳೂರು– ತಮ್ಮ ಮಂತ್ರಿಮಂಡಲದಲ್ಲಿ ಜತ್ತಿ ಗುಂಪಿನ ಒಬ್ಬಿಬ್ಬರು ಪ್ರತಿನಿಧಿಗಳಿಗೆ ಸ್ಥಾನ ಕೊಡಲು ಮುಖ್ಯ ಮಂತ್ರಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

★

ಕೃಷಿ ಆದಾಯ ಬಾಕಿ

ಬೆಂಗಳೂರು— ರಾಜ್ಯದಲ್ಲಿ ಭೂ ಕಂದಾಯ, ನೀರಿನ ಕಂದಾಯ, ಉತ್ಪನ್ನಗೊಳಿಸುವ ಲೆವಿ ಬಾಕಿಯಲ್ಲಿ ಈ ವರ್ಷದ್ದೂ ಸೇರಿ, ರೂ. 27 ಕೋಟಿ ಆಗಿದೆಯೆಂದೂ, ಈ ಪೈಕಿ ಈ ವರ್ಷದ್ದೇ ಸುಮಾರು ರೂ. 7 ಕೋಟಿ ಎಂದೂ ಕಂದಾಯ ಮಂತ್ರಿಯವರು ಹೇಳಿರುವರು – ಇದರಲ್ಲಿ ಶೇಕಡಾ 75 ರಷ್ಟನ್ನಾದರೂ ಈ ಕ್ಯಾಲೆಂಡರು ವರ್ಷದೊಳಗೆ ವಸೂಲ್ಮಾಡುವಂತೆ ಜಿಲ್ಲಾ ಮತ್ತು ವಿಭಾಗಾಧಿಕಾರಿಗಳಿಗೆ ತಿಳಿಸಿರುವುದಾಗಿ ಹೇಳಿದರು.

ಸತ್ಯವಾದಿ "ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈ 28 ರಂದು ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವೈ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಯವರು ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ವಿದ್ಯಾಭ್ಯಾಸಕ್ಕಾಗಿ

ನವದೆಹಲಿ— ರಾಷ್ಟ್ರೀಯ ಆದಾಯದಲ್ಲಿ ವಿದ್ಯಾಭ್ಯಾಸಕ್ಕೆ ಶೇಕಡ 6 ಖರ್ಚು ಮಾಡುವ ರಾಷ್ಟ್ರೀಯ ವಿದ್ಯಾನೀತಿಯನ್ನು ಕೇಂದ್ರ ಮಂತ್ರಿಮಂಡಲ ಒಪ್ಪಿದೆ.

ಹೈದರಾಬಾದು— ರಾಜ್ಯದ ಹೊರಕ್ಕೆ ಅಕ್ಕಿ ಕಳಿಸುವ ವಿಷಯವನ್ನು ಸರ್ಕಾರ ಪುನರ್ಪರ್ಯಾಲೋಚಿಸಬೇಕಾಗಿದೆ ಎಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

Golden Jubilee Celebrations of the 'SATYAVADI'

on Sunday 28 th July 1968, at 6 p m.

★

Dr. Nagappa Alva, President, M. P. C. C.
has kindly consented to preside.

ಹಿಂದೂಗಳ ಆಚಾರ

ಸಂಗ್ರಾಹಕರು– "ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಹಿಂದುಗಳು ಆಚಾರವನ್ನು ಬಿಡುತ್ತಿರುವ ಕಾರಣಗಳು— ಸಹಸ್ರಾರು ವರ್ಷಗಳಿಂದ ಹಿಂದುಗಳು ತಮ್ಮ ಆಚಾರವನ್ನು ಪರಂಪರಾನುಕ್ರಮವಾಗಿ ತಪ್ಪದೇ ಆಚರಿಸುತ್ತಾ ಬರುತ್ತಿದ್ದರು. ಆದರೆ ಈಗ್ಗೆ 50 ವರ್ಷಗಳಿಂದೀಚೆಗೆ ಆಚಾರವನ್ನು ಅನುಸರಿಸುವುದರಲ್ಲಿ ಉದಾಸೀನತೆ ಕಾಣುತ್ತಿದ್ದೇವೆ. ಈಚಿನ ಯುವಕರಂತೂ ಅದರ ಬಗ್ಗೆ ಸ್ವಲ್ಪವೂ ಲಕ್ಷ್ಯ ಕೊಡದೇ ಇದ್ದಾರೆ. ಈ ರೀತಿ ಆಗಲು ಕಾರಣವೇನು? ಈ ರೀತಿ ಆಚಾರವನ್ನು ಬಿಟ್ಟರೆ ಉಂಟಾಗುವ ಪರಿಣಾಮವೇನು? ಎಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕು.

Golden Jubilee of 'Satyavadi'

The golden jubilee of the 'Satyavadi' is to be celebrated on July-28 th.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.



ಮುಂದಿನವಾರ ಆರಂಭ

ಅಶೋಕ 4 ನೇ ವಾರ

ಮುಖ್ಯೋಪಕ ಈಸ್ಟ್ಮನ್ ಕಲರ್ ಹಿಂದಿ ಚಿತ್ರ

ಮುಡ್‌ಆಂಡ್

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ– ಶಂಕರ್ ಜೈಕಿಷನ್ [ಐನ 3 ಪ್ರದರ್ಶನಗಳು]

ಅಪೂರ್ವ—

ಜನವರಿಯ 3 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಾರ್ಥ ಜೋಳಿಗೆ ನೀಡಿ

ಶ್ರೀಶಾಸ್ತ್ರೀಜಿ ಜಗದ್ಗುರು ಶಂಕರಾಚಾರ್ಯಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯಮಿಗಳವರು ಉದಾರ ಆಶೀರ್ವಾದ ಕೃಪೆಯಿಂದಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಾಬಲ್ಯವೆಂದು, ತಾಲ್ಲೂಕುಗಳಲ್ಲಿ ಪ್ರಚಾರ ಮಾಡುವ ಸಲುವಾಗಿ : ಪ್ರತಿಯೊಂದಕ್ಕೆ ಬೆಲೆ 50 ಪೈಸೆ

— ಗೋರಕ್ಷಣಾ ಪ್ರವರ್ತಕ ಮಂಡಲದ ವಿನಂತಿ —

ಗೋರಕ್ಷಣಾರ್ಥ ಜೋಳಿಗೆಯನ್ನು ಪ್ರೋತ್ಸಾಹಿಸಿ ಧನವನ್ನೂ ಮಾಡಿಸಾಮಗ್ರಿಗಳನ್ನೂ ಶ್ರೀಘ್ರವಾಗಿ ಸಲ್ಲಿಸಬೇಕಾಗಿ ವಿನಂತಿ

ಹಣ್ಣು ಓ ಎಸ್ ನಾರಾಯಣ್, ಶ್ರೀ ಪಿ.ಕೆ. ವಿಶ್ವನಾಥ್ ಬಸವನಗುಡಿ, ಬೆಂಗಳೂರು

ಶ್ರೀ ಬಿ. ಜಿ. ಶಾಮ್ಯ್ರಗಳು, 1080 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತಶಯನಂ ಐಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಳಲ್ಕೆರೆ

ಗೋರಕ್ಷಣಾ ಅಭಿಯಾನ ಪತ್ರಿಕಾವಿಶೇಷ ಹಾವುಂಡಿಪುರಂ ಮೈಸೂರು 4

ವಿಳಾಸ—ಗೋರಕ್ಷಣ ಅಭಿಯಾನ 1087 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋವಧೆಯನ್ನು ತಡೆಗಟ್ಟಲು ಕಾನೂನಿನಲ್ಲಿ ಅವಕಾಶವಿದೆ ಅದನ್ನು ಉಪಯೋಗಿಸಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4